26/3/2018

# ರೈ ಎಸ್ಟೇಟ್ ಎಜ್ಯುಕೇಶನಲ್ ಚಾರಿಟೇಬಲ್ ಟ್ರಸ್ಟ್‌ನ ಫಲಾನುಭವಿಗಳು-ಕಟ್ಟಡ ಕಾರ್ಮಿಕರ ಸಮಾವೇಶ

## ಅಶಕ್ತರ ಕಣ್ಣೀರು ಒರೆಸುವ ಕ್ರಾಂತಿಕಾರಿ ಕಾರ್ಯ ಅಶೋಕ್ ರೈ ನೇತೃತ್ವದಲ್ಲಿ ನಡೆಯುತ್ತಿದೆ-ಡಿ.ವಿ.ಎಸ್

ಪುತ್ತೂರು: ಸಮಾಜದ ಅಶಕ್ತರ ಕಣ್ಣೀರು ಒರೆಸುವಂತಹ ಕ್ರಾಂತಿಕಾರಿ ಕಾರ್ಯ ಅಶೋಕ್ ರೈಯವರ ನೇತೃತ್ವದ ರೈ ಎಸ್ಟೇಟ್ಸ್ ಎಜ್ಯುಕೇಶನಲ್ ಆ್ಯಂಡ್ ಚಾರಿಟೇಬಲ್ ಟ್ರಸ್ಟ್ ಮೂಲಕ ನಡೆಯುತ್ತಿದೆ ಎಂದು ಕೇಂದ್ರದ ಸಾಂಖ್ಯಿಕ ಮತ್ತು ಕಾರ್ಯಕ್ರಮ ಅನುಷ್ಠಾನ ಖಾತೆ ಸಚಿವ ಡಿ.ವಿ. ಸದಾನಂದ ಗೌಡ ಹೇಳಿದರು.

ಮಾ. 25ರಂದು ದರ್ಬೆ ಎನ್‌ಕ್ಲೇವ್ ಕಟ್ಟಡದ ಆವರಣದಲ್ಲಿ ನಡೆದ ಕೋಡಿಂಬಾಡಿ ರೈ ಎಸ್ಟೇಟ್ ಮಾಲಕರಾದ ದ.ಕ. ಜಿಲ್ಲಾ ಬಿಜೆಪಿ ಕಾರ್ಯಕಾರಿಣಿ ಸದಸ್ಯ ಅಶೋಕ್ ಕಮಾರ್ ರೈಯವರು ಪ್ರವರ್ತಕರಾಗಿರುವ ರೈ ಎಸ್ಟೇಟ್ ಎಜ್ಯುಕೇಶನಲ್ ಚಾರಿಟೇಬಲ್ ಟ್ರಸ್ಟ್‌ನ ಜನ ಸೇವಾ. ಕೇಂದ್ರದ ಪಲಾನುಭವಿಗಳು ಮತ್ತು ಕಟ್ಟಡ ಕಾರ್ಮಿಕರ ಬೃಹತ್ ಸಮಾವೇಶವನ್ನು ದೀಪ ಬೆಳಗಿಸಿ ಉದ್ಘಾಟಿಸಿ ಮಾತನಾಡಿದ ಸದಾನಂದ ಗೌಡರವರು ನಾವು ಸಮಾಜದಿಂದ ಪಡೆದಿರುವುದನ್ನು ಮರಳಿ ಸಮಾಜಕ್ಕೆ ನೀಡುವ



ಚಿತ್ರಗಳು: ಅಶ್ವಿನಿ ಪುತ್ತೂರು

ಕೇಂದ್ರ ಸಚಿವ ಡಿ.ವಿ.ಸದಾನಂದ ಗೌಡರವರಿಂದ ಉದ್ಘಾಟನೆ

ಪ್ರವೃತ್ತಿ ಪ್ರತಿಯೊಬ್ಬ ವ್ಯಕ್ತಿಯಲ್ಲೂ ಬರಬೇಕು. ಆಗ ಸಮಾಜದ ಋಣ ತೀರಿಸಲು ಸಾಧ್ಯ. ಸವಲತ್ತುಗಳಿಗೆ ಕೇವಲ ಸರಕಾರಗಳನ್ನೇ ಅವಲಂಬಿಸಿದರೆ ಸಾಲದು. ಸಮಾಜದಲ್ಲಿರುವ (5ನೇ ಪುಟಕ್ಕೆ)